ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 30–3–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ವಿವಿಧ ಅಭಿವೃದ್ಧಿ ಮತ್ತು ಉನ್ನತೀಕರಣ ಕಾಮಗಾರಿಗೆ ಅಡಿಗಲ್ಲು<br><br>ಶ್ರೀ ನಿತಿನ್ ಜಯರಾಂ ಗಡ್ಕರಿ, ಕೇಂದ್ರ ರಸ್ತೆ ಸಾರಿಗೆ ಹಾಗೂ ರಾಷ್ಟ್ರೀಯ ಬಂದರು ಖಾತೆ ಸಚಿವರು.<br><br>ಮುಖ್ಯ ಅತಿಥಿಗಳು:<br><br>ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು<br><br>ಶ್ರೀ ಅನಂತಕುಮಾರ್, ಕೇಂದ್ರ ರಾಸಾಯನಿಕ, ರಸಗೊಬ್ಬರ ಖಾತೆ ಸಚಿವರು.<br><br>ಶ್ರೀ ಡಿ.ವಿ. ಸದಾನಂದಗೌಡ, ಕೇಂದ್ರ ಕಾನೂನು ಸಚಿವರು.<br><br>ಡಾ. ಹೆಚ್. ಸಿ. ಮಹಾದೇವಪ್ಪ, ರಾಜ್ಯ ಲೋಕೋಪಯೋಗಿ ಸಚಿವರು. | **31-03-2015**<br>ಮಂಗಳವಾರ<br>ಬೆಳಿಗ್ಗೆ<br>10–00 ಗಂಟೆಗೆ | ರಿಜನ್ಸಿ ಹಾಲ್,<br>ಹೋಟೆಲ್ ವಿಂಡ್ಸರ್ ಮ್ಯಾನರ್,<br>ಗಾಲ್ಫ್ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದ ಸುದ್ದಿಗಳು:

## ರಾಜ್ಯ ಆಯವ್ಯಯ ಅಂದಾಜಿನ ಚರ್ಚೆಗೆ ಮುಖ್ಯಮಂತ್ರಿಗಳ ಉತ್ತರ

**ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)**

**ರಾಜ್ಯದ 2015–16 ನೇ ಸಾಲಿನ ಆಯವ್ಯಯ ಅಂದಾಜಿನ ಮೇಲೆ ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ನೀಡಿದ ಉತ್ತರದ ಕೆಲ ಅಂಶಗಳು** :

- ಮಾರ್ಚ್ 13, 2015 ರಂದು ಮುಂಗಡ ಪತ್ರ ಮಂಡಿಸಿದ್ದೇನೆ. ಆಯವ್ಯವದ ಅಂದಾಜಿನ ಮೇಲೆ 32 ಮಂದಿ ವಿಧಾನಸಭೆಯಲ್ಲಿ ಮಾತನಾಡಿದ್ದಾರೆ. ಕಳೆದ ಬಾರಿ 26 ಜನ ಮಾತನಾಡಿದ್ದು, ಇದೊಂದು ಒಳ್ಳೆಯ ಬೆಳವಣಿಗೆ.
- ಕೆಲವು ಇಲಾಖೆಯ ಮೇಲೆ ದೀರ್ಘವಾಗಿ ಚರ್ಚೆ.
- ಚರ್ಚೆಯಲ್ಲಿ ಒಳ್ಳೆಯ ಸಲಹೆ, ಟೀಕೆಗಳು ಬಂದಿವೆ. ಸಮಚಿತ್ತದಿಂದ ಎಲ್ಲವನ್ನು ಸ್ವೀಕಾರ.
- ಬೂಸ ಆಯವ್ಯಯ ಎಂದು ಟೀಕೆ, ದಲಿತಭಾಗ್ಯ, ಅಹಿಂದ ಭಾಗ್ಯ ಎಂದು ಟೀಕೆಗಳು ಬಂದಿವೆ.
- ಇದು ಈ ಸರ್ಕಾರದ ಮೂರನೇ ಆಯವ್ಯಯ.
- ಸರ್ವರನ್ನು ಒಳಗೊಂಡ ಆಯವ್ಯಯವಿದು ಆರ್ಥಿಕವಾಗಿ ವಿಶೇಷವಾಗಿ ದುರ್ಬಲರನ್ನು ಗಮನಿಸುವುದು ಸರ್ಕಾರದ ಆದ್ಯ ಕರ್ತವ್ಯ.
- ಒಂದು ರೂ.ಗೆ ಅಕ್ಕಿ ಕೊಡುತ್ತಿದ್ದು, ಮುಂದಿನ ವರ್ಷ ಪುಕ್ಕಟೆಯಾಗಿ ಕೊಡುವ ಆಲೋಚನೆ ಇದೆ.
- ಎಪಿಎಲ್ ಕಾರ್ಡುದಾರರಿಗೂ ರಿಯಾಯಿತಿ ದರ ಅಕ್ಕಿ. ಇದು ಮಧ್ಯಮ ಹಾಗೂ ಕೆಳಮಧ್ಯಮ ವರ್ಗದವರಿಗೂ ಅನುಕೂಲ.

- ನೀರಾವರಿಗೆ 12000 ದಿಂದ 13,000 ಕೋಟಿ ರೂ. ವೆಚ್ಚ.
- 3 ಲಕ್ಷ ರೂ. ಗಳಿಗೆ ಶೂನ್ಯ ಬಡ್ಡಿದರದ ಸಾಲ. 3 ರಿಂದ 10 ಲಕ್ಷ ರೂ. ವರೆಗೆ ಶೇಕಡಾ 3 ರ ಬಡ್ಡಿದರದ ಸಾಲ.
- ಬಿಪಿಎಲ್ ಕಾರ್ಡುದಾರರಿಗೆ ಸರ್ಕಾರವೇ ಷೇರು ಹಣ ನೀಡಿ ಸಹಕಾರ ಸಂಘಗಳ ಸದಸ್ಯತ್ವ ನೀಡಿಕೆ. 1.08 ಲಕ್ಷ ಕುಟುಂಬಗಳಿಗೆ ಇದರಿಂದ ಪ್ರಯೋಜನ. ಯಶಸ್ವಿನಿ ಯೋಜನೆ ಅವರಿಗೂ ಅನುಷ್ಠಾನ.
- ಈ ಆಯವ್ಯಯವು ಸರ್ವರ ಬಜೆಟ್ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ.
- ಬೂಸ ಬಜೆಟ್ ಎಂದು ಹೇಳಿರುವುದು ಸಮಂಜಸವಲ್ಲ.
- ಬದ್ಧತೆಯ ಕಾರ್ಯನಿರ್ವಹಣೆಯಿಂದ ಮಾತ್ರ ಉತ್ತಮ ಆಡಳಿತ ನೀಡಿಕೆ ಸಾಧ್ಯ.
- 2014-15 ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಲ್ಲಿ 15,834 ಕೋಟಿ ರೂ. ವೆಚ್ಚ. ಈ ಆಯವ್ಯಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ವೆಚ್ಚ. 2015-16 ರ ಆಯವ್ಯಯದಲ್ಲಿ 16354 ಕೋಟಿ ರೂ. ವೆಚ್ಚದ ಅಂದಾಜು. 2014-15 ನೇ ಸಾಲಿನಲ್ಲಿ ಫೆಬ್ರವರಿ ಅಂತ್ಯದವರೆಗೆ ಶೇಕಡಾ 50 ರಷ್ಟು ವೆಚ್ಚ.
- ಎಲ್ಲರನ್ನು ಒಳಗೊಂಡ ಅಭಿವೃದ್ಧಿ ಪರವಾದ, ಸಾಮಾಜಿಕ ನ್ಯಾಯವನ್ನು ಒಳಗೊಂಡ ಮುನ್ನೋಟವಿರುವ ಆಯವ್ಯಯ.
- ಸಾಮಾಜಿಕ ನ್ಯಾಯ – ನಮ್ಮ ಸಂಸ್ಕೃತಿ.
- 1,42,534 ಕೋಟಿ ರೂ. 2015-16 ನೇ ಸಾಲಿನ ಆಯವ್ಯಯದ ಅಂದಾಜು. 2014-15 ನೇ ಸಾಲಿನ ಬಜೆಟ್ ಅಂದಾಜು 1,38,008 ಲಕ್ಷ ರೂ. ಗಳು. ಬೆಳವಣಿಗೆ ದರ ಶೇಕಡಾ 3.27 ಕ್ಕಿಂತ ಹೆಚ್ಚು.
- 14 ನೇ ಹಣಕಾಸು ಆಯೋಗದಲ್ಲಿ ಶೇಕಡಾ 42 ಕ್ಕೆ ಹೆಚ್ಚಳವಾದ ಹಿನ್ನೆಲೆಯಲ್ಲಿ 2015-16 ರಲ್ಲಿ 8,300 ಕೋಟಿ ರೂ. ಕೇಂದ್ರದಿಂದ ಹೆಚ್ಚು ಅನುದಾನ.
- ಕೇಂದ್ರದಿಂದ ತೆರಿಗೆ ಬಾಬ್ತು ಒಟ್ಟಾರೆ 24,790 ಕೋಟಿ. ರೂ. ನೀಡಿಕೆ. ಕೇಂದ್ರದಿಂದ 1987 ಕೋಟಿ ರೂ. ಕಡಿಮೆಯಾಗಿದೆ.

- ಕೇಂದ್ರ ಪುರಸ್ಕೃತ ಯೋಜನೆಗಳಿಗೆ 4,689 ಕೋಟಿ ರೂ. ಗಳನ್ನು ರಾಜ್ಯ ಹೊಂದಾಣಿಕೆ ಮಾಡಬೇಕಿದೆ.

- ಆಯವ್ಯಯ ಕೇವಲ ಅಂದಾಜುಗಳು ಅಷ್ಟೇ.

- ಕೇಂದ್ರ ಸರ್ಕಾರಕ್ಕೆ ನಿಯೋಗ ಕೊಂಡೊಯ್ಯುವ ಸೂಚನೆ ಸ್ವಾಗತಾರ್ಹ.

- ರಾಜ್ಯದ ಯೋಜನಾ ಗಾತ್ರ 2015-16 ರಲ್ಲಿ 72,597 ಕೋಟಿ ರೂ. ಬೆಳವಣಿಗೆ ದರ ಶೇ 10.67.

- 2014-15 ರಲ್ಲಿ ಯೋಜನಾ ಗಾತ್ರದ ಗುರಿ ಸಾಧನೆ. ಸಾಧಿಸುವ ನಿರೀಕ್ಷೆ ಇದೆ. ಫೆಬ್ರವರಿ ಅಂತ್ಯದವರೆಗೆ ಶೇ 79 ಸಾಧನೆಯಾಗಿದೆ.

- 2014-15 ನೇ ಸಾಲಿನವರೆಗೆ ರಾಜ್ಯದ ಅಂದಾಜು ಸಾಲ ಸುಮಾರು 1,57,000 ಕೋಟಿ ರೂ. ಗಳು. 2014-15 ರವರೆಗೆ ರಾಜ್ಯದ ವಾಸ್ತಾವಿಕ ಸಾಲ ಶೇ. 22.87

- ರಾಜ್ಯ ಸರ್ಕಾರ ಕಳೆದ ಮೂರು ವರ್ಷದಲ್ಲಿ ವಿತ್ತೀಯ ಶಿಸ್ತಿನೊಳಗೆ ಇದೆ.

- ರಾಜ್ಯವು ತೆರಿಗೆ ಸಂಗ್ರಹದಲ್ಲಿ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಹಾಗೆಯೇ ವಾಣಿಜ್ಯ ತೆರಿಗೆ ಸಂಗ್ರಹದಲ್ಲೂ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ.

- ಇಂಧನ ಬೆಲೆ ಏರಿಕೆಯಿಂದ ರಾಜ್ಯದ ತೆರಿಗೆ ಆದಾಯ 450 ರಿಂದ 500 ಕೋಟಿ ರೂ. ಕಡಿಮೆಯಾಗುವ ನಿರೀಕ್ಷೆಯಿದೆ.

- ನೀರಾವರಿಗೆ 11,518 ಕೋಟಿ ರೂ. ನೀಡಿದ್ದು, 2014-15 ನೇ ಸಾಲಿನ 1516 ಕೋಟಿ ರೂ. ಗಳ ಹೆಚ್ಚಳ ಮಾಡಲಾಗಿದೆ (ಸಣ್ಣ ನೀರಾವರಿ ಯೋಜನೆ ಹೊರತುಪಡಿಸಿ)

- ಸರಿಸುಮಾರು ಎಲ್ಲಾ ಇಲಾಖೆಗೆಗಳಿಗೆ ನೀಡಿರುವ ಅನುದಾನದಲ್ಲಿ ಹೆಚ್ಚಳವಾಗಿದೆ.

- 2014-15 ನೇ ಸಾಲಿನಲ್ಲಿ 14,500 ಉಪಾಧ್ಯಾಯರ ನೇಮಕಮಾಡುವ ಗುರಿ ಇದೆ.

ಬಾಬು:ಜಿಪಿಆರ್.

## ಕಿದ್ವಾಯಿ ಆಸ್ಪತ್ರೆ : ಮೇಲ್ದರ್ಜೆಗೇರಿಸಲು ಕ್ರಮ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯನ್ನು 120 ಕೋಟಿ ರೂ. ವೆಚ್ಚದಲ್ಲಿ ರಾಜ್ಯ ಮಟ್ಟ ಸಂಸ್ಥೆಯನ್ನಾಗಿ ಮೇಲ್ದರ್ಜೆಗೇರಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 600 ಹಾಸಿಗೆಯ ಸಾಮರ್ಥ್ಯವನ್ನು ಹೊಂದಿರುವ ಈ ಆಸ್ಪತ್ರೆಯಲ್ಲಿ ಹೊರ ರೋಗಿಗಳಾಗಿ ರೇಡಿಯೋ ಥೆರಪಿ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಿರುವುದರಿಂದ ರೇಡಿಯೋ ಥೆರಪಿ ರೋಗಿಗಳು ಕಾಯಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಇನ್ನೂ ಹೆಚ್ಚಿನ ರೇಡಿಯೋ ಥೆರಪಿ ಚಿಕಿತ್ಸಾ ಘಟಕಗಳನ್ನು ತೆರೆಯಲು ತೀರ್ಮಾನಿಸಲಾಗಿದೆ ಎಂದರು.

ಪ್ರತಿ ವರ್ಷ ಸುಮಾರು 20 ಸಾವಿರ ರೋಗಿಗಳು ದಾಖಲಾಗುತ್ತಿದ್ದು, ನುರಿತ ತಜ್ಞ ವೈದ್ಯರುಗಳೂ ವಿಶ್ವ ದರ್ಜೆಯ ಗುಣಮಟ್ಟದ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಆದಾಗ್ಯೂ ಆಧುನಿಕತೆಗೆ ತಕ್ಕಂತೆ ಹಾಗೂ ರೋಗಿಗಳ ಚಿಕಿತ್ಸಾ ಸೌಕರ್ಯಗಳನ್ನು ಇನ್ನೂ ಉತ್ತಮ ಮಟ್ಟಕ್ಕೆ ಹೆಚ್ಚಿಸುವ ಸಲುವಾಗಿ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಈ ಸಂಸ್ಥೆಯನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು. ಈಗಾಗಲೇ 12 ಕೋಟಿ ರೂ. ಅನುದಾನಕ್ಕೆ ಸರ್ಕಾರಿ ಆದೇಶವಾಗಿದೆ. ಕೇಂದ್ರ ಸರ್ಕಾರ ಈಗಾಗಲೇ 67 ಕೋಟಿ ರೂ. ವೆಚ್ಚದಲ್ಲಿ ಕ್ಯಾನ್ಸರ್ ರೋಗಿಗಳಿಗೆ ಅತ್ಯುತ್ತಮ ಚಿಕಿತ್ಸಾ ಸೇವೆಗಳನ್ನು ನೀಡುತ್ತಿದೆ. ಒಂದೇ ಸೂರಿನಡಿ ಎಲ್ಲಾ ಸೇವೆಯನ್ನು ನೀಡಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಮುಂದಿನ ಒಂಭತ್ತು ತಿಂಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದೆಂದು ಸಚಿವರು ತಿಳಿಸಿದರು.

ಬಾಬು:ಪೂರ್ಣಿಮ:ಜಿಪಿಆರ್.

## ಸಮುದಾಯ ಭವನ ನಿರ್ಮಾಣಕ್ಕೆ 75 ಕೋಟಿ ರೂ. ಅನುದಾನ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ರಾಜ್ಯಾದ್ಯಂತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸಮುದಾಯ ಭವನಗಳನ್ನು ನಿರ್ಮಿಸುವ ಸಲುವಾಗಿ ಸರ್ಕಾರವು 75 ಕೋಟಿ ರೂ. ಅನುದಾನವನ್ನು ಕಾಯ್ದಿರಿಸಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ತಿಳಿಸಿದರು.

ವಿಧಾನ ಪರಿಷತ್ತಿನ ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಎನ್.ಎಸ್. ಬೋಸ್‌ರಾಜು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಇಲಾಖೆವತಿಯಿಂದ ರಾಯಚೂರು ಜಿಲ್ಲೆಯ ರಾಯಚೂರು ತಾಲ್ಲೂಕಿನಲ್ಲಿ ಮೂರು ಹಾಗೂ ಮಾನ್ವಿ ತಾಲ್ಲೂಕಿನಲ್ಲಿ ಒಂದು ಮಹಿಳಾ ಸಮುದಾಯ ಭವನಗಳಿವೆ ಎಂದು ತಿಳಿಸಿದರು.

2014–15 ನೇ ಸಾಲಿಗೆ ಸಮುದಾಯ ಭವನ ನಿರ್ಮಾಣಕ್ಕಾಗಿ ಸಲ್ಲಿಸಲಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ಪ್ರಸ್ತಾವನೆಯ ಜೊತೆಯಲ್ಲಿಯೇ ನಿವೇಶನವನ್ನು ಗುರುತಿಸಿ ನೀಡಿದವರಿಗೆ ಮೊದಲ ಆದ್ಯತೆಯ ಮೇಲೆ ಹಣ ಬಿಡುಗಡೆ ಮಾಡಲಾಗುವುದೆಂದು ಸಚಿವರು ಭರವಸೆ ನೀಡಿದರು.

ಬಾಬು:ಪೂರ್ಣಿಮ:ಜಿಪಿಆರ್.

## ವಿಧಾನ ಪರಿಷತ್ತಿನಲ್ಲಿ ಕೆ. ಗೋವಿಂದರಾಜು ಅವರಿಗೆ ಅಭಿನಂದನೆ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ವಿಧಾನ ಪರಿಷತ್‌ನ ಸದಸ್ಯ ಕೆ. ಗೋವಿಂದರಾಜು ಬ್ಯಾಸ್ಕೆಟ್ ಬಾಲ್ ಫೆಡರೇಷನ್ ಆಫ್ ಇಂಡಿಯಾದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ವಿಧಾನ ಪರಿಷತ್ತಿನ ಸಭಾಪತಿ ಡಿ. ಹೆಚ್. ಶಂಕರಮೂರ್ತಿ ಅಭಿನಂದನೆ ಸಲ್ಲಿಸುವುದಾಗಿ ಸದನಕ್ಕೆ ತಿಳಿಸಿದರು.

ದಕ್ಷಿಣ ಭಾರತದ ವ್ಯಕ್ತಿಯೊಬ್ಬರು ಮೊದಲ ಬಾರಿಗೆ ಈ ಸ್ಥಾನಕ್ಕೆ ಆಯ್ಕೆಯಾಗಿರುವುದು ಕೂಡ ಇವರ ಹೆಗ್ಗಳಿಕೆಯಾಗಿದೆ ಎಂದು ಸಭಾಪತಿ ತಿಳಿಸಿದರು.

ವಿರೋಧ ಪಕ್ಷದ ನಾಯಕ ಕೆ.ಎಸ್. ಈಶ್ವರಪ್ಪ ಅವರು ಕೂಡ ಗೋವಿಂದರಾಜು ಅವರಿಗೆ ಅಭಿನಂದೆ ಸಲ್ಲಿಸಿ, ಜೊತೆಗೆ ಕ್ರೀಡಾ ಆಸಕ್ತಿ ಹೊಂದಿರುವ ಶ್ರೀಯುತರನ್ನು ಕ್ರೀಡಾ ಸಚಿವರನ್ನಾಗಿ ಮಾಡಬೇಕಾಗಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಾಬು:ಪೂರ್ಣಿಮ:ಜಿಪಿಆರ್.

## ಜೂನ್‌ನೊಳಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಅಧ್ಯಕ್ಷರ ನೇಮಕ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ಜೂನ್ ಮಾಹೆಯೊಳಗೆ ಖಾಲಿ ಇರುವ ಎಲ್ಲಾ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರನ್ನು ನೇಮಕ ಮಾಡಲಾಗುವುದೆಂದು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್ತಿನಲ್ಲಿ ಸದಸ್ಯ ಐವಾನ್ ಡಿಸೋಜಾ ಪ್ರಶ್ನೋತ್ತರ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ರಾಜ್ಯಾದ್ಯಂತ 26 ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರ ಸ್ಥಾನಗಳು ಖಾಲಿ ಇದ್ದು ಇತ್ತೀಚೆಗೆ ನಾಲ್ವರು ಅಧ್ಯಕ್ಷರನ್ನು ನೇಮಿಸಲಾಗಿದೆ. ಉಳಿದ 22 ಸ್ಥಾನ ಭರ್ತಿಮಾಡಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ ಎಂದರು.

ಇದುವರೆವಿಗೂ ಅಧ್ಯಕ್ಷರ ಸ್ಥಾನಗಳಿಗೆ ನಿವೃತ್ತ ಜಡ್ಜ್‌ಗಳನ್ನು ಮಾತ್ರ ನೇಮಿಸಲಾಗುತ್ತಿತ್ತು. ಹಿರಿಯ ವಕೀಲರನ್ನು ಈ ಹುದ್ದೆಗೆ ನೇಮಿಸಲು ಅವಕಾಶವಿರುವ ಹಿನ್ನೆಲೆಯಲ್ಲಿ ನುರಿತ ಹಿರಿಯ ವಕೀಲರನ್ನು ಈ ಹುದ್ದೆಗೆ ನೇಮಿಸಲು ಕ್ರಮಕೈಗೊಳ್ಳಲಾಗುವುದೆಂದರು.

ಸಾರ್ವಜನಿರಿಗೆ ಅನುಕೂಲವಾಗಿರುವ ಈ ಇಲಾಖೆಯ ಮೇಲೆ ಚರ್ಚೆ ನಡೆದಿರುವುದು ಅಪರೂಪ. ಮಂಗಳೂರಿನ ಜನರು ಬಹಳ ಜಾಗೃತರಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫೆಬ್ರವರಿ ಮಾಹೆಯ ಅಂತ್ಯಕ್ಕೆ 604 ದೂರುಗಳನ್ನು ಈ ವೇದಿಕೆಯ ಮುಖಾಂತರ ಇತ್ಯರ್ಥಪಡಿಸಲಾಗಿದೆ ಎಂದು ತಿಳಿಸಿದರು.

ಬಾಬು:ಪೂರ್ಣಿಮ:ಜಿಪಿಆರ್.

## ವಿವಿಧ ಹುದ್ದೆಗೆ ಅರ್ಜಿ ಆಹ್ವಾನ

**ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಖಾಲಿ ಇರುವ ನ್ಯಾಯಾಂಗ ವೃಂದದ ಒಂದು ಸದಸ್ಯರ ಹುದ್ದೆ ಹಾಗೂ ವಿವಿಧ ಜಿಲ್ಲಾ ವೇದಿಕೆಗಳಲ್ಲಿ ಖಾಲಿಯಿರುವ ಹಾಗೂ ಖಾಲಿಯಾಗಲಿರುವ 22 ಅಧ್ಯಕ್ಷರ, 16 ಮಹಿಳಾ ಸದಸ್ಯರ ಹಾಗೂ 17 ಪುರುಷ ಸದಸ್ಯರ ಹುದ್ದೆಗಳನ್ನು ಭರ್ತಿಮಾಡುವ ಸಲುವಾಗಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ

ಈ ಸಂಬಂಧ ದಿನಾಂಕ 16-3-2015 ರ ವಿಶೇಷ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಸಹ ಪ್ರಕಟಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.